# ಎಡುಬುಂಟು ೧೨.೦೪ (ಕಲ್ಪವೃಕ್ಷ) - ಅಳವಡಿಕೆ

## ಸಿಸ್ಟಮ್ ಅಗತ್ಯತೆಗಳು

1. 20 ಥಿನ್ ಕ್ಲಯಂಟ್ಸ್ ಬಳಕೆದಾರರಿದ್ದರೆ, ಕನಿಷ್ಠ 4GB RAM. (ಒಂದೇ ಕಂಪ್ಯೂಟರ್ನಲ್ಲಿ ಅಳವಡಿಸುವುದಾದರೆ 1GB RAM ಇದ್ದರೆ ಸಾಕು)
2. 160 GB ಹಾರ್ಡ್ ಡಿಸ್ಕ್
3. Core 2 Duo ಪ್ರಾಸೆಸ್ಸರ್

## ಅಳವಡಿಸುವುದು ಹೇಗೆ?

ಕಂಪ್ಯೂಟರ್ CD/DVD ಯನ್ನು ಬಳಸಿ ಶುರುವಾಗಬೇಕು. (ಸಾಮಾನ್ಯವಾಗಿ ಅದು ಹಾರ್ಡ್ ಡಿಸ್ಕ್ ಅನ್ನು ಬಳಸಿ ಶುರುವಾಗುತ್ತದೆ)




- DVD ಯನ್ನು ಕಂಪ್ಯೂಟರ್ ನಲ್ಲಿ ಹಾಕಿ ಪುನ: ಪ್ರಾರಂಭಿಸಿ
- ಅದು DVD ಯನ್ನು ಬಳಸಿ ಶುರುವಾದರೆ ಈ ಸ್ಕ್ರೀನ್ ಅನ್ನು ನೋಡುತ್ತೀರ.
- ಇಲ್ಲದಿದ್ದರೆ ಯಾವಗಲೂ ಶುರುಆಗುವ ರೀತಿಯಲ್ಲಿ ಶುರುವಾಗುತ್ತದೆ.




- ಆಗ, ನಿಮ್ಮ ಕಂಪ್ಯೂಟರ್ ಅನ್ನು ಪುನ: ಶುರುಮಾಡಿ. ಶುರುವಾದ ತಕ್ಷಣ ಬರುವ ಮೆಸೆಜ್ ಓದಿ, ಅಲ್ಲಿ setup ಗೆ ತೋರಿಸುವ key ಅನ್ನು ಒತ್ತಿ. (ಸಾಮಾನ್ಯವಾಗಿ ಅದು F2, F8, F12 ಅಥವಾ Delete key ಆಗಿರುತ್ತದೆ) Arrow key ಗಳನ್ನು ಬಳಸಿ **Boot** ಅನ್ನು ಆಯ್ದುಕೊಳ್ಳಿ, ಮತ್ತು **Boot Device Priority** ಮೇಲೆ enter ಒತ್ತಿ




- ಈಗಾಗಲೇ ಆಯ್ಕೆ ಆಗಿರುವ **1st Boot Device** ಮೇಲೆ Enter ಒತ್ತಿ. ಪಟ್ಟಿಇಂದ CD/DVD ROM ಅನ್ನು ಆಯ್ದು ಕೊಳ್ಳಿ
- **F**10 ಒತ್ತಿ, ಮಾಡಿರುವ ಬದಲಾವಣೆಗಳನ್ನು ಹಾಗೆ ಇರಿಸಿ ಹೊರಬರಲು, Enter ಒತ್ತಿ. ಈಗ ನಿಮ್ಮ

ಕಂಪ್ಯೂಟರ್ DVD ಇಂದ ಶುರು ಆಗುತ್ತದೆ.

*ಗಮನಿಸಿ: ಇಲ್ಲಿ mouse ಕೆಲಸ ಮಾಡುವುದಿಲ್ಲ. ಎಲ್ಲಾ ಕಂಪ್ಯೂಟರ್ ಗಳಲ್ಲಿ ಇದೆ ತರಹದ ಚಿತ್ರಗಳು ಕಾಣದೇ ಇರಬಹುದು ಬೇರೆ ರೀತಿಯಲ್ಲಿ ಕಂಡರೂ ಸಮಾನವಾದ ಆಯ್ಕೆಗಳು ಇರುತ್ತವೆ.*

- ಮೊದಲನೆ ಚಿತ್ರದಲ್ಲಿ ಕಾಣುವ ಸ್ಕ್ರೀನ್ ನಿಮಗೆ ಕಾಣುತ್ತದೆ. ಕೀಲಿಮಣೆಯನ್ನು ಬಳಸಿ **Install – start the installer directly** ಎನ್ನುವುದನ್ನು ಆಯ್ದುಕೊಳ್ಳಿ







- ಈ ಹಂತದಲ್ಲಿ ನೀವು ಭಾಷೆಯನ್ನು ಆಯ್ದುಕೊಳ್ಳಿ. ಆದೇ ಭಾಷೆಯಲ್ಲೇ ಎಡುಬುಂಟು ಅನುಸ್ಥಾಪನೆಯಾಗುತ್ತದೆ. Forward ಗುಂಡಿಯನ್ನು ಒತ್ತಿ.
- ಮುಂದಿನ ಹಂತದಲ್ಲಿ ಆವಶ್ಯಕವಾದಷ್ಟು ಜಾಗ ಕಂಪ್ಯೂಟರ್ ನಲ್ಲಿ ಇದೆಯೇ, ವಿದ್ಯುತ್ ಸಂಪರ್ಕ ಹೊಂದಿದೆಯೇ, ಮತ್ತು Internet ಇದೆಯೇ ಎಂದು ಪರಿಶೀಲಿಸುತ್ತದೆ. ಸುಮ್ಮನೆ Forward ಗುಂಡಿ ಮೇಲೆ ಒತ್ತಿ.







- ಇಲ್ಲಿ ನೀವು ಎಡುಬುಂಟುವನ್ನು ಹೇಗೆ install ಮಾಡಬೇಕೆಂದು ಆಯ್ಕೆ ಮಾಡಿ, ನಿಮ್ಮ ಕಂಪ್ಯೂಟರ್ ನಲ್ಲಿ ಈಗಾಗಲೇ ಬೇರೆ ಆಪರೇಟಿಂಗ್ ಸಿಸ್ಟಮ್ ಇದ್ದು ಅದರೊಟ್ಟಿಗೆ ಎಡುಬುಂಟುವನ್ನು ಅಳವಡಿಸಬೇಕೆಂದರೆ ಮೊದಲನೇಯದನ್ನು ಆಯ್ದು ಕೊಳ್ಳಿ. ಇಲ್ಲವಾದರೆ ಎರಡನೇಯದನ್ನು ಆಯ್ದುಕೊಳ್ಳಿ. Forward ಗುಂಡಿ ಒತ್ತಿ.
- ನಂತರದ ಹಂತದಲ್ಲಿ ನಿಮ್ಮ ನೆಲೆಯನ್ನು ನಕ್ಷೆಯಮೇಲೆ ಗುರುತಿಸಿ. Forward ಗುಂಡಿಯನ್ನು ಒತ್ತಿ.

- ಮುಂದೆ, ನೀವು ಬಳಸುವ ಕೀಲಿಮಣೆ ಎಂತಹುದು ಎಂದು ತಿಳಿಸಿ (ಸಾಮಾನ್ಯವಾಗಿ ಅದು English (US)) ಆಗಿರುತ್ತದೆ. Forward ಗುಂಡಿಯನ್ನು ಒತ್ತಿ.
- ಕೊನೆಯದಾಗಿ, ನಿಮ್ಮ ಹೆಸರು, ಕಂಪ್ಯೂಟರಿಗೊಂದು ಹೆಸರು ಮತ್ತು ಪಾಸ್ ವರ್ಡ್ ಅನ್ನು ನಮೂದಿಸಿ Forward ಗುಂಡಿಯನ್ನು ಒತ್ತಿ.







- ಇಲ್ಲಿಂದ ಮುಂದಿನ ಕೆಲಸವನ್ನು ಕಂಪ್ಯೂಟರ್ ಮಾಡುತ್ತದೆ.
- ಅನುಸ್ಥಾಪನೆ ಮುಗಿದ ನಂತರ ನಿಮಗೆ Installation Complete ಎಂಬ ಸಂದೇಶ ಕಾಣುತ್ತದೆ. Restart now ಮೇಲೆ click ಮಾಡಿ, DVD ಅನ್ನು ಹೊರಗೆ ತೆಗೆಯಿರಿ.
- ಈಗ ಎಡುಬುಂಟು ಉಪಯೋಗಿಸಲು ಸಿದ್ಧ.